M.V.C .NO. 2103–2022

PW–1

dated: 30–05–2024.

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದೆ.

ಪಾಟೀ ಸವಾಲುಃ ಎದುರುದಾರ ಪರವಾಗಿ ಶ್ರೀ ಎಸ ಎಸ ಎ ವಕೀಲರಿಂದಃ.

ನಾನು ಪಿಯುಸಿ ದ್ವಿತೀಯ ವರ್ಷದವರೆಗೆ ಓದಿರುತ್ತೇನೆ . ಅಪಘಾತದ ದಿನ ನಾನು ಬೆಳಗಾವಿಯಿಂದ ಎಂ ಕೆ ಹುಬ್ಬಳಿ ಗ್ರಾಮಕ್ಕೆ ಹೋಗುತ್ತಿದ್ದೇನು . ನಾನು ಕೆ ಎಸ ಆರ ಟಿ ಸಿ ಬಸ್ಸನಲ್ಲಿ ಮಧ್ಯದ ಸೀಟಿನಲ್ಲಿ ಕುಳಿತಿದ್ದೆ . ಅಪಘಾತದ ಸಮಯದಲ್ಲಿ ಸದರಿ ಬಸ್ಸಿನಲ್ಲಿ 20 ರಿಂದ 25 ಜನ ಇದ್ದರು . ನಾನು ಮಧ್ಯದ ಸೀಟಿನಲ್ಲಿ ಕುಳುತ್ತಿದ್ದ ಮುಂಭಾಗದ ರಸ್ತೆ ಕಾಣುತ್ತಿರಲ್ಲಿಲ್ಲ ಎಂದರೆ ನಿಜ . ಹೀಗಾಗಿ ಅಪಘಾತ ಹೇಗಾಯಿತು ಎಂದು ನನಗೆ ಗೊತ್ತಿಲ್ಲಾ ಎಂದರೆ ಸರಿಯಲ್ಲ . ಅಪಘಾತವು ಕೆ ಎಸ ಆರ ಟಿ ಸಿ ಬಸ್ಸ ಚಾಲಕನಿಂದ ಆಗಿದೆ ಎಂದರೆ ಸರಿಯಲ್ಲ . ಅಪಘಾತವಾದ ತಕ್ಷಣ ನಾನು ಹೀರೆ ಬಾಗೇವಾಡಿಯ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಹೋಗಿರುತ್ತೇನೆ . ಸದರಿ ಆಸ್ಪತ್ರೆಯಲ್ಲಿ ನನಗೆ ಪ್ರಥಮ ಚಿಕಿತ್ಸೆ ನೀಡಿ ಬೈಲಹೊಂಗಲಿನ ಮಲಪ್ರಭಾ ಆಸ್ಪತ್ರಗೆ ಕಳಿಸಿರುತ್ತಾರೆ . ನನಗೆ ಯಾವುದೇ ಗಾಯಗಳು ಆಗಿರರಲ್ಲಿ ಹೀಗಾಗಿ ನನಗೆ ಪ್ರಥಮ ಚಿಕಿತ್ಸೆ ಮಾಡಿ ಕಳಿಸಿರುತ್ತಾರೆ ಎಂದರೆ ಸರಿಯಲ್ಲ . ನನ್ನ ಆಸ್ಪತ್ರೆಯ ಖರ್ಚು ರೂಪಾಯಿ 50,000/- ಬರೆಸಿರುತ್ತೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ . ಆಸ್ಪತ್ರೆಯಲ್ಲಿ ನನಗೆ ಸಂಪೂರ್ಣ ಗುಣಮುಖವಾದ ನಂತರ ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಬಿಡುಗಡೆ ಮಾಡಿದ ನಂತರ ಮತ್ತೆ ಆಸ್ಪತ್ರೆಗೆ 4-5 ಸಲ ಪುನಃ ಆಸ್ಪತ್ರೆಗ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ . ಇತ್ತಿಚಿಗೆ 6 ತಿಂಗಳ ಹಿಂದೆ ನಾನು ಆಸ್ಪತ್ರೆಗೆ ಪುನಃ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ . ಆಗ ಆಸ್ಪತ್ರೆಯಲ್ಲಿ ನನಗೆ ಫಿಜೀಯೋತೆರಫಿ ಮಾಡಿರುತ್ತಾರೆ . ನಾನು ಹೇಳುವಂತೆ ನೀರಾವರಿ ಜಮೀನುಗಳ ಇದ್ದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲಾ . ಹತ್ತಿ , ಕಬ್ಬು ಮತ್ತು ತರಕಾರಿ ಬೆಳೆದು ಪ್ರತಿ ತಿಂಗಳು 30,000/- ಸಂಪಾದಿಸುತ್ತಿದ್ದೆ ಎಂದು ಸುಳ್ಳು ಹೇಳ್ತುತ್ತಿದ್ದೇನೆ

ಎಂದರೆ ಸರಿಯಲ್ಲ . ನಾನು ಅಪಘಾತದ ಪೂರ್ವದಲ್ಲಿ ಹೇಗೆ ದೈಹಿಕವಾಗಿ ಸದೃಡವಾಗಿದ್ದೇನೋ ಅದೇ ರೀತಿ ಈಗಲೂ ಸಹ ದೈಹಿಕವಾಗಿ ಸದೃಢ ವಾಗಿರುತ್ತೇನೆ ಎಂದರೆ ಸರಿಯಲ್ಲ . ವೈದ್ಯರ ಜೊತೆ ಮಿಲಾಫೆಯಾಗಿ ಸುಳ್ಳು ಆಸ್ಪತ್ರೆಯ ದಾಖಲೆಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ.
(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಬೈಲಹೊಂಗಲ.

SSG